ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 24-02-1998.

# *ತಂದೆಯೊಂದಿಗೆ, ಸೇವೆಯೊಂದಿಗೆ ಮತ್ತು ಪರಿವಾರದೊಂದಿಗೆ ಪ್ರೀತಿಯನ್ನು ಇಟ್ಟುಕೊಳ್ಳಿರಿ ಆಗ ಪರಿಶ್ರಮದಿಂದ ಮುಕ್ತರಾಗುವಿರಿ.*

(बाप से, सेवा से और परिवार से मुहब्बत रखो तो मेहनत से छुट जायेंगे)

ಇಂದು ನಾಲ್ಕಾರು ಕಡೆಯ ಮಕ್ಕಳು ತಮ್ಮ ತಂದೆಯ ಜಯಂತಿಯನ್ನು ಆಚರಿಸಲು ಬಂದಿದ್ದಾರೆ. ಭಲೇ ಸನ್ಮುಖದಲ್ಲಿ ಕುಳತಿರಲಿ, ಆಕಾರಿ ರೂಪದಲ್ಲಿ ತಂದೆಯ ಮುಂದಿರಲಿ, ತಂದೆಯು ಎಲ್ಲಾ ಮಕ್ಕಳನ್ನು ನೋಡುತ್ತಿದ್ದಾರೆ – ಒಂದು ಕಡೆ ಮಿಲನ ಆಚರಿಸುವ ಖುಷಿಯಿದೆ ಇನ್ನೊಂದು ಕಡೆ ಬೇಗ-ಬೇಗ ಬಾಪ್‌ದಾದಾರವರನ್ನು ಪ್ರತ್ಯಕ್ಷ ಮಾಡುವ ಸೇವೆಯ ಉತ್ಸಾಹ-ಉಲ್ಲಾಸಗಳಿವೆ. ಬಾಪ್‌ದಾದಾರವರು ನಾಲ್ಕಾರು ಕಡೆಯ ಮಕ್ಕಳನ್ನು ನೋಡುತ್ತಾ ಪದಮಾ ಪದಮದಷ್ಟು ಶುಭಾಷಯಗಳನ್ನು ಕೊಡುತ್ತಿದ್ದಾರೆ. ಹೇಗೆ ಮಕ್ಕಳು ತಂದೆಯ ಜಯಂತಿಯನ್ನು ಆಚರಿಸಲು ಕೋಣೆ- ಕೋಣೆಯಿಂದ, ದೂರ-ದೂರದಿಂದ ಬಂದಿದ್ದಾರೆಯೋ, ಬಾಪ್‌ದಾದಾವರು ಸಹ ಮಕ್ಕಳ ಜನ್ಮದಿನವನ್ನು ಆಚರಿಸಲು ಬಂದಿದ್ದಾರೆ. ಎಲ್ಲದಕ್ಕಿಂತ ದೂರ ದೇಶದವರು ಯಾರಾಗಿದ್ದಾರೆ? ತಂದೆಯೇ ಅಥವಾ ನೀವೇ? ನೀವು ಹೇಳುವಿರಿ - ನಾವು ಬಹಳ ದೂರದಿಂದ ಬಂದಿದ್ದೇವೆ ಎಂದು ಆದರೆ ತಂದೆಯು ನಾನು ನಿಮಗಿಂತಲೂ ದೂರದೇಶದಿಂದ ಬಂದಿದ್ದೇನೆ ಎಂದು ಹೇಳುತ್ತಾರೆ. ಆದರೆ ನಿಮಗೆ ಸಮಯ ಬೇಕಾಗುತ್ತದೆ, ತಂದೆಗೆ ಸಮಯ ಬೇಕಾಗುವುದಿಲ್ಲ. ನಿಮ್ಮೆಲ್ಲರಿಗೂ ಪ್ಲೇನ್ (ವಿಮಾನ) ಅಥವಾ ರೈಲು ತೆಗೆದುಕೊಳ್ಳಬೇಕಾಗುತ್ತದೆ, ತಂದೆ ಕೇವಲ ರಥವನ್ನು ತೆಗೆದುಕೊಳ್ಳುತ್ತಾರೆ. ಕೇವಲ ನೀವು ಮಾತ್ರ ತಂದೆಯ ಜನ್ಮದಿನವನ್ನು ಆಚರಿಸಲು ಬಂದಿದ್ದೀರಿ ಎಂದು ತಿಳಿಯಬೇಡಿರಿ ತಂದೆಯು ಆದಿಯ ಜೊತೆಗಾರ ಬ್ರಾಹ್ಮಣ ಆತ್ಮರ ಜನ್ಮದಿನದ ಜೊತೆ ಮಕ್ಕಳ ಜನ್ಮದಿನವನ್ನೂ ಆಚರಿಸಲು ಬಂದಿದ್ದಾರೆ. ಏಕೆಂದರೆ ತಂದೆ ಒಬ್ಬರೇ ಅವತರಿತರಾಗುವುದಿಲ್ಲ ಆದರೆ ಬ್ರಹ್ಮಾ & ಬ್ರಾಹ್ಮಣ ಮಕ್ಕಳ ಜೊತೆಯಲ್ಲಿ ದಿವ್ಯ ಜನ್ಮವನ್ನು ತೆಗೆದುಕೊಳ್ಳುತ್ತಾರೆ ಅರ್ಥಾತ್ ಅವತರಿತರಾಗುತ್ತಾರೆ. ಬ್ರಾಹ್ಮಣರಿಲ್ಲದೇ ಯಜ್ಞದ ರಚನೆಯನ್ನು ತಂದೆಯೊಬ್ಬರೇ ಮಾಡಲು ಸಾಧ್ಯವಿಲ್ಲ. ಅಂದಾಗ ಯಜ್ಞವನ್ನು ರಚಿಸಿದರು, ಆಗ ನೀವೆಲ್ಲರೂ ಹುಟ್ಟಿದ್ದೀರಿ. ಎರಡು ವರ್ಷದವರಾಗಿರಬಹುದು, ಎರಡು ತಿಂಗಳಿನವರಾಗಿರಬಹುದು ಆದರೆ ನೀಮ್ಮೆಲ್ಲರಿಗೂ ಸಹ ದಿವ್ಯ ಬ್ರಾಹ್ಮಣ ಜನ್ಮದ ಶುಭಾಷಯಗಳು. ಈ ದಿವ್ಯ ಜನ್ಮ ಎಷ್ಟು ಶ್ರೇಷ್ಠವಾಗಿದೆ. ತಂದೆಯು ಸಹ ಪ್ರತಿಯೊಬ್ಬ ದಿವ್ಯ ಜನ್ಮಧಾರಿ ಬ್ರಾಹ್ಮಣ ಆತ್ಮರ ಭಾಗ್ಯದ ನಕ್ಷತ್ರ ಹೊಳೆಯುತ್ತಿರುವುದನ್ನು ನೋಡಿ ಹರ್ಷಿತರಾಗುತ್ತಾರೆ. ಮತ್ತು ಸದಾ ಇದೇ ಗೀತೆಯನ್ನು ಹಾಡುತ್ತೀರುತ್ತಾರೆ – “ವಾಹ್! ವಜ್ರ ಸಮಾನ ಜೀವನದ ಬ್ರಾಹ್ಮಣ ಮಕ್ಕಳೇ ವಾಹ್!” ವಾಹ್ ವಾಹ್ ಇದೆಯಲ್ಲವೇ? ತಂದೆಯು ವಾಹ್ ವಾಹ್ ಮಕ್ಕಳನ್ನಾಗಿ ಮಾಡಿದರು. ಈ ಅಲೌಕಿಕ ಜನ್ಮ ತಂದೆಗೂ ಅತೀತವಾದುದು ಮತ್ತು ಮಕ್ಕಳಾದ ನಿಮ್ಮದೂ ಅತೀತ ಮತ್ತು ಪ್ರಿಯವಾಗಿದೆ. ಇವರೊಬ್ಬರೇ

ಇಂತಹ ತಂದೆಯಾಗಿದ್ದಾರೆ. ತಂದೆಯೊಬ್ಬರಿಗೇ ಈ ರೀತಿಯಾದ ಜನ್ಮ ಮತ್ತು ಜಯಂತಿ ಇರುತ್ತದೆ. ಇನ್ಯಾರಿಗೂ ಈ ರೀತಿಯಾದ ಜನ್ಮ ದಿನವಿಲ್ಲ ಮತ್ತು ಇರುವುದಿಲ್ಲ. ನಿರಾಕಾರನು ಮತ್ತು ಪಡೆಯುವುದು ದಿವ್ಯ ಜನ್ಮ. ಉಳಿದ ಆತ್ಮರೆಲ್ಲರೂ ತಮ್ಮ ತಮ್ಮ ಸಾಕಾರಿ ಶರೀರಗಳಲ್ಲಿ ಜನ್ಮವನ್ನು ಪಡೆಯುತ್ತಾರೆ. ಯಾರ ಜನ್ಮ ಅಥವಾ ಜಯಂತಿಯೂ ಈ ರೀತಿಯಾಗಿಲ್ಲ, ಆಗುವುದೂ ಇಲ್ಲ. ನಿರಾಕಾರ ಮತ್ತು ದಿವ್ಯ ಜನ್ಮ. ಬೇರೆ ಎಲ್ಲಾ ಆತ್ಮರ ಜನ್ಮ ತಮ್ಮ-ತಮ್ಮ ಸಾಕಾರ ಶರೀರದಲ್ಲಿ ಆಗುತ್ತದೆ ಆದರೆ ನಿರಾಕಾರ ತಂದೆಯ ಜನ್ಮ ಪರಕಾಯ ಪ್ರವೇಶದಿಂದ ಆಗುತ್ತದೆ. ಇಡೀ ಕಲ್ಪದಲ್ಲಿ ಹೀಗೆ ಈ ವಿಧಿಯಿಂದ ಯಾರದಾದರೂ ಜನ್ಮವಾಗಿದೆಯೇ? ಒಬ್ಬ ತಂದೆಯದ್ದೇ ಇಂತಹ ಭಿನ್ನ ಜನ್ಮವಾಗುತ್ತದೆ ಯಾವುದನ್ನು ಶಿವಜಯಂತಿಯ ರೂಪದಲ್ಲಿ ಭಕ್ತರು ಆಚರಿಸಲು ಬಂದಿದ್ದಾರೆ. ಅದಕ್ಕಾಗಿ ಈ ದಿವ್ಯ ಜನ್ಮದ ಮಹತ್ವವನ್ನು ನೀವು ತಿಳಿದುಕೊಂಡಿದ್ದೀರಿ, ಭಕ್ತರು ತಿಳಿದುಕೊಂಡಿಲ್ಲ ಆದರೆ ಏನು ಕೇಳಿದ್ದಾರೆಯೋ ಅದರ ಪ್ರಮಾಣ ಶ್ರೇಷ್ಠಾತಿ ಶ್ರೇಷ್ಠವೆಂದು ತಿಳಿದು ಆಚರಿಸುತ್ತಾ ಬಂದಿದ್ದಾರೆ. ನೀವು ಮಕ್ಕಳು ಕೇವಲ ಆಚರಿಸುವುದಿಲ್ಲ ಆದರೆ ಆಚರಿಸುವುದರ ಜೊತೆಯಲ್ಲಿ ಸ್ವಯಂನ್ನು ತಂದೆಯ ಸಮಾನ ಮಾಡಿಕೊಳ್ಳುತ್ತೀರಿ. ಅಲೌಕಿಕ ದಿವ್ಯ ಜನ್ಮದ ಮಹತ್ವವನ್ನು ತಿಳಿದುಕೊಂಡಿದ್ದೀರಿ. ಬೇರೆ ಯಾರದೂ ತಂದೆ ಮತ್ತು ಮಕ್ಕಳ ಜೊತೆ-ಜೊತೆಯಲ್ಲಿ ಜನ್ಮವಾಗುವುದಿಲ್ಲ ಆದರೆ ಶಿವ ಜಯಂತಿ ಅರ್ಥಾತ್ ತಂದೆಯ ದಿವ್ಯ ಜನ್ಮದ ಜೊತೆಯಲ್ಲಿ ಮಕ್ಕಳ ಜನ್ಮದಿನವೂ ಆಗಿದೆ, ಅದಕ್ಕಾಗಿಯೇ ಡೈಮಂಡ್ ಜೂಬ್ಲಿಯನ್ನು ಆಚರಿಸಿದ್ದೀರಲ್ಲವೇ. ಅಂದಾಗ ತಂದೆಯ ಜೊತೆಯಲ್ಲಿ ಮಕ್ಕಳದ್ದು ದಿವ್ಯ ಜನ್ಮವಾಗಿದೆ. ಕೇವಲ ಈ ಜಯಂತಿಯನ್ನು ವಜ್ರ ಸಮಾನ ಜಯಂತಿ ಎಂದು ಹೇಳುತ್ತೀರಿ ಆದರೆ ವಜ್ರ ಸಮಾನ ಜಯಂತಿಯನ್ನು ಆಚರಿಸಲು ಸ್ವಯಂ ವಜ್ರ ಸಮಾನ ಜೀವನದಲ್ಲಿ ಬಂದು ಬಿಡುತ್ತೀರಿ. ಈ ರಹಸ್ಯವನ್ನು ಎಲ್ಲಾ ಮಕ್ಕಳು ಚೆನ್ನಾಗಿ ತಿಳಿದುಕೊಂಡಿದ್ದೀರಿ ಮತ್ತು ಬೇರೆಯವರಿಗೂ ತಿಳಿಸುತ್ತಿರುತ್ತೀರಿ. ಬಾಪ್‌ದಾದಾರವರು ಸಮಾಚಾರವನ್ನು ಕೇಳುತ್ತಿರುತ್ತಾರೆ, ನೋಡುತ್ತಲೂ ಇರುತ್ತಾರೆ – ಮಕ್ಕಳು ತಂದೆಯ ದಿವ್ಯ ಜನ್ಮದ ಮಹತ್ವವನ್ನು ಎಷ್ಟು ಉತ್ಸಾಹ ಉಲ್ಲಾಸದಿಂದ ಆಚರಿಸುತ್ತಿರುತ್ತಾರೆ. ಬಾಪ್‌ದಾದಾರವರು ನಾಲ್ಕಾರು ಕಡೆಯ ಸೇವಧಾರಿ ಮಕ್ಕಳಿಗೆ ಸಾಹಸ(ಧೈರ್ಯ)ದ ರಿಟರ್ನ್‌ನಲ್ಲಿ ಸಹಾಯ ಮಾಡುತ್ತಿರುತ್ತಾರೆ. ಮಕ್ಕಳ ಧೈರ್ಯ ಮತ್ತು ತಂದೆಯ ಸಹಯೋಗವಿದೆ.

ಇತ್ತೀಚೆಗೆ ಬಾಪ್‌ದಾದಾರವರ ಬಳಿ ಎಲ್ಲಾ ಮಕ್ಕಳದ್ದು ಒಂದೇ ಸ್ನೇಹದ ಸಂಕಲ್ಪ ಪದೇ-ಪದೇ ಬರುತ್ತದೆ ಈಗ ತಂದೆಯ ಸಮಾನ ಬೇಗ ಬೇಗ ಆಗಲೇಬೇಕು. ತಂದೆಯು ಸಹ ಹೇಳುತ್ತಾರೆ - ಮಧುರ ಮಕ್ಕಳೇ, ಆಗಲೇಬೇಕು. ಪ್ರತಿಯೊಬ್ಬರಿಗೂ ದೃಢ ನಿಶ್ಚಯವಿದೆ ಮತ್ತು ಅಂಡರ್ಲೈನ್ ಮಾಡಿಕ್ಕೊಳ್ಳಿರಿ ನಾವು ಆಗಿಲ್ಲವೆಂದರೆ ಮತ್ತ್ಯಾರು ಆಗುವರು. ನಾವೇ ಆಗಿದ್ದೇವು, ನಾವೇ ಆಗಿದ್ದೇವೆ ಮತ್ತು ನಾವೇ ಪ್ರತಿ ಕಲ್ಪದಲ್ಲಿ ಆಗುತ್ತಿರುತ್ತೇವೆ. ಇದು ಪಕ್ಕಾ ನಿಶ್ಚಯವಿದೆಯಲ್ಲವೇ? ಡಬಲ್ ವಿದೇಶಿಯರು ಸಹ ಶಿವ ಜಯಂತಿ ಆಚರಿಸಲು ಬಂದಿದ್ದಾರೆ? ಒಳ್ಳೆಯದು, ಡಬಲ್ ವಿದೇಶಿಯರು ಕೈ ಎತ್ತಿರಿ. ಬಾಪ್‌ದಾದಾರವರು ನೋಡುತ್ತಿದ್ದಾರೆ ಡಬಲ್ ವಿದೇಶಿಯರಿಗೆ ಎಲ್ಲದಕ್ಕಿಂತ ಹೆಚ್ಚು ಇದೇ ಉತ್ಸಾಹ ಉಲ್ಲಾಸವಿದೆ. ವಿಶ್ವದ ಯಾವುದೇ ಮೂಲೆ ಉಳಿಯಬಾರದು. ಭಾರತಕ್ಕೆ ಸೇವೆಗಾಗಿ ಸಾಕಷ್ಟು ಸಮಯ ಸಿಕ್ಕಿದೆ ಮತ್ತು ಭಾರತದವರು ಹಳ್ಳಿ-ಹಳ್ಳಿಯಲ್ಲಿ ಸಂದೇಶವನ್ನು ಕೊಟ್ಟಿದ್ದಾರೆ. ಆದರೆ ಡಬಲ್ ವಿದೇಶಿಯರಿಗೆ ಸೇವೆಗೆ ಭಾರತಕ್ಕಿಂತ ಕಡಿಮೆ ಸಮಯ ಸಿಕ್ಕಿದೆ. ಆದರೂ ಸಹ ಉತ್ಸಾಹ ಉಲ್ಲಾಸದ ಕಾರಣ ಬಾಪ್‌ದಾದಾರವರ ಮುಂದೆ ಸೇವೆಯ ಪುರಾವೆ(ಗುರುತು) ಚೆನ್ನಾಗಿ

ತಂದಿದ್ದೀರಿ ಮತ್ತು ತರುತ್ತೀರಿ. ಭಾರತದಲ್ಲಿ ವರ್ತಮಾನ ಸಮಯ ವರ್ಗೀಕರಣದ ಸೇವೆಗಳು ಆರಂಭವಾಗಿವೆ, ಅವುಗಳ ಕಾರಣವೂ ಎಲ್ಲಾ ವರ್ಗದವರಿಗೆ ಸಂದೇಶ ಸಿಗುವುದು ಸಹಜವಾಗಿ ಬಿಟ್ಟಿದೆ ಏಕೆಂದರೆ ಪ್ರತಿಯೊಂದು ವರ್ಗವು ತಮ್ಮ ವರ್ಗ ಮುಂದುವರೆಯಲು ಬಯಸುತ್ತಿದ್ದಾರೆ. ಈ ವರ್ಗೀಕರಣದ ಆವಿಶ್ಕಾರ ಚೆನ್ನಾಗಿದೆ. ಇದರಿಂದ ಭಾರತದ ಸೇವೆಯಲ್ಲಿ ವಿಶೇಷ ಆತ್ಮರು ಬರಲು ಒಳ್ಳೆಯ ಪ್ರಭಾವ ಬೀರುತ್ತದೆ. ಚೆನ್ನಾಗೆನಿಸುತ್ತದೆಯಲ್ಲವೇ. ವರ್ಗೀಕರಣದ ಸೇವೆ ಚೆನ್ನಾಗಿದೆಯೇ? ವಿದೇಶದವರೂ ತಮ್ಮ ಒಳ್ಳೊಳ್ಳೆಯ ಗ್ರೂಪ್ ತೆಗೆದುಕೊಂಡು ಬರುತ್ತಾರೆ, ರಿಟ್ರೀಟ್ ಮಾಡಿಸಿಸುತ್ತಾರೆ, ವಿಧಿ ಚೆನ್ನಾಗಿದೆ. ಹೇಗೆ ಭಾರತದಲ್ಲಿ ವರ್ಗೀಕರಣದಿಂದ ಸೇವೆಯಲ್ಲಿ ಅವಕಾಶವು ಸಿಗುತ್ತದೆಯೋ, ಹಾಗೆಯೇ ಇವರದೂ ಈ ವಿಧಿ ಬಹಳ ಚೆನ್ನಾಗಿದೆ. ಬಾಪ್‌ದಾದಾರವರಿಗೆ ಎರಡು ಕಡೆಯ ಸೇವೆಯೂ ಇಷ್ಟವೇ, ಚೆನ್ನಾಗಿದೆ. ಜಗದೀಶ ಮಗುವು ಈ ಆವಿಷ್ಕಾರ ಚೆನ್ನಾಗಿ ಮಾಡಿದ್ದಾರೆ ಮತ್ತು ವಿದೇಶದಲ್ಲಿ ಈ ರಿಟ್ರೀಟ್, ಭಾಷಣಗಳು ಯಾರು ಆರಂಭಿಸಿದರು? (ಎಲ್ಲರೂ ಸೇರಿಕೊಂಡು ಮಾಡಿದರು) ಭಾರತದಲ್ಲಿಯೂ ಸೇರಿಕೊಂಡು ಮಾಡಿದರು ಆದರೆ ನಿಮಿತ್ತರಾದರು. ಒಳ್ಳೆಯದು, ಪ್ರತಿಯೊಬ್ಬರಿಗೆ ತಮ್ಮ ಜೊತೆಗಾರರ ಸಂಘಟನೆಯಲ್ಲಿ ಚೆನ್ನಾಗೆನಿಸುತ್ತದೆ. ಎರಡು ಕಡೆಯ ಸೇವೆಯಲ್ಲಿ ಅನೇಕ ಆತ್ಮರನ್ನು ಸಮೀಪ ತರುವ ಅವಕಾಶ ಸಿಕ್ಕಿದೆ. ಫಲಿತಾಂಶ ಇಷ್ಟವಾಗುತ್ತದೆಯಲ್ಲವೇ? ರಿಟ್ರೀಟ್ನ ಫಲಿತಾಂಶ ಚೆನ್ನಾಗಿದೆಯೇ? ಮತ್ತು ವರ್ಗೀಕರಣದ ಪರಿಣಾಮವೂ ಚೆನ್ನಾಗಿದೆ, ದೇಶ-ವಿದೇಶದವರು ಯಾವುದಾದರೂ ಹೊಸ ಆವಿಷ್ಕಾರವನ್ನು ಮಾಡುತ್ತಿದ್ದಾರೆ ಮತ್ತು ಮಾಡುತ್ತಿರುತ್ತಾರೆ. ಭಾರತದಲ್ಲಿರಬಹುದು ಅಥವಾ ವಿದೇಶದಲ್ಲಿ ಸೇವೆಯ ಉಲ್ಲಾಸ ಚೆನ್ನಾಗಿದೆ. ಯಾರು ಸತ್ಯ ಹೃದಯದಿಂದ ನಿಸ್ವಾರ್ಥ ಸೇವೆಯಲ್ಲಿ ಮುಂದುವರೆಯುತ್ತಾ ಹೋಗುತ್ತಾರೆಯೋ, ಅವರ ಖಾತೆಯಲ್ಲಿ ಪುಣ್ಯದ ಖಾತೆ ಹೆಚ್ಚು ಜಮಾ ಆಗುತ್ತಾ ಹೋಗುವುದು. ಬಾಪ್‌ದಾದಾರವರು ನೋಡುತ್ತಾರೆ. ಕೆಲ ಮಕ್ಕಳದು ಒಂದಾಗಿದೆ ತಮ್ಮ ಪುರುಷಾರ್ಥದ ಪ್ರಾಲಬ್ಧದ ಖಾತೆ, ಎರಡನೇಯದು ಸಂತುಷ್ಟರಾಗಿ, ಸಂತುಷ್ಟರನ್ನಾಗಿ ಮಾಡುವುದರಿಂದ ಆಶೀರ್ವಾದದ ಖಾತೆ ಮತ್ತು ಮೂರನೇಯದಾಗಿದೆ ಯಥಾರ್ಥ ಯೋಗಯುಕ್ತ, ಯುಕ್ತಿಯುಕ್ತ ಸೇವೆಯ ರಿಟರ್ನ್‌ನಲ್ಲಿ ಪುಣ್ಯದ ಖಾತೆ ಜಮಾ ಆಗುವುದು. ಪ್ರತಿಯೊಬ್ಬರ ಈ ಮೂರು ಖಾತೆಗಳನ್ನು ಬಾಪ್‌ದಾದಾರವರು ನೋಡುತ್ತಿರುತ್ತಾರೆ. ಮೂರು ಖಾತೆಗಳ ಜಮಾ ಆದವರ ಲಕ್ಷಣಗಳಾಗಿವೆ - ಅವರು ಸದಾ ಸಹಜ ಪುರುಷಾರ್ಥಿಯಾಗಿ ತಮ್ಮನ್ನು ಸಹ ಅನುಭವ ಮಾಡುತ್ತಾರೆ ಮತ್ತು ಬೇರೆಯವರಿಗೂ ಸಹ ಆ ಆತ್ಮನಿಂದ ಸಹಜ ಪುರುಷಾರ್ಥದ ಸ್ವತಃ ಪ್ರೇರಣೆ ಸಿಗುತ್ತದೆ. ಅದು ಸಹಜ ಪುರುಷಾರ್ಥದ ಚಿಹ್ನೆಯಾಗಿದೆ. ಪರಿಶ್ರಮ ಪಡಬೇಕಾಗಿಲ್ಲ, ತಂದೆಯೊಂದಿಗೆ, ಸೇವೆಯೊಂದಿಗೆ ಮತ್ತು ಸರ್ವ ಪರಿವಾರದೊಂದಿಗೆ ಪ್ರೀತಿಯಿದ್ದರೆ ಈ ಮೂರು ಪ್ರಕಾರದ ಪ್ರೀತಿ ಪರಿಶ್ರಮದಿಂದ ಮುಕ್ತರನ್ನಾಗಿ ಮಾಡಿಬಿಡುತ್ತದೆ.

ಬಾಪ್‌ದಾದಾರವರು ಎಲ್ಲಾ ಮಕ್ಕಳೊಂದಿಗೆ ಇದೇ ಶ್ರೇಷ್ಠ ಆಸೆಯನ್ನು ಇಟ್ಟುಕೊಳ್ಳುತ್ತಾರೆ. ಎಲ್ಲಾ ಮಕ್ಕಳು ಸಹಜ ಪುರುಷಾರ್ಥಿಯಾಗಿರಲಿ. 63 ಜನ್ಮ ಭಕ್ತಿಯಲ್ಲಿ, ಗೊಂದಲದಲ್ಲಿ ಅಲೆದಾಡುವ ಪರಿಶ್ರಮ ಪಟ್ಟಿದ್ದೀರಿ, ಈಗ ಪರಿಶ್ರಮದಿಂದ ಮುಕ್ತರಾಗಲು ಇದು ಒಂದೇ ಜನ್ಮವಾಗಿದೆ. ಒಂದುವೇಳೆ ಬಹಳಕಾಲದಿಂದ ಪರಿಶ್ರಮ ಪಡುತ್ತಿದ್ದರೆ ಈ ಸಂಗಮಯುಗದ ವರದಾನ - ಪ್ರೀತಿಯಿಂದ ಸಹಜ ಪರುಷಾರ್ಥಿ ಯಾವಾಗ ಆಗುವಿರಿ? ಯುಗ ಸಮಾಪ್ತಿಯಾದರೆ ವರದಾನವೂ ಸಮಾಪ್ತಿ. ಅಂದಾಗ ಸದಾ ಈ ವರದಾನವನ್ನು ಬಹಳ ಬೇಗನೆ ತೆಗೆದುಕೊಳ್ಳಿರಿ. ಯಾವುದೇ ದೊಡ್ಡಕ್ಕಿಂತ ದೊಡ್ಡ ಕಾರ್ಯವಿರಲಿ,

ಯಾವುದೇ ದೊಡ್ಡಕ್ಕಿಂತ ದೊಡ್ಡ ಸಮಸ್ಯೆಯಿರಲಿ. ಆದರೆ ಪ್ರತಿಯೊಂದು ಕಾರ್ಯ, ಪ್ರತಿಯೊಂದು ಸಮಸ್ಯೆಯನ್ನು ಹೇಗೆ ಪಾರಾಗಬೇಕೆಂದರೆ ನೀವು ಹೇಳುತ್ತೀರಲ್ಲವೇ ಬೆಣ್ಣೆಯಿಂದ ಕೂದಲು ತೆಗೆದಷ್ಟು ಸಹಜವಾಗಿ ದಾಟಬೇಕು. ಕೆಲವು ಮಕ್ಕಳಲ್ಲಿ ಸ್ವಲ್ಪ-ಸ್ವಲ್ಪ ಬಾಪ್‌ದಾದಾರವರು ಆಟವನ್ನು ನೋಡುತ್ತಾರೆ, ಹರ್ಷಿತರೂ ಆಗುತ್ತಾರೆ ಮತ್ತು ಕೆಲ ಮಕ್ಕಳನ್ನು ನೋಡಿ ದಯೆಯೂ ಬರುತ್ತದೆ. ಯಾವುದೇ ಸಮಸ್ಯೆ ಅಥವಾ ಯಾವುದೇ ದೊಡ್ಡ ಕಾರ್ಯವು ಮುಂದೆ ಬಂದಾಗ ಕೆಲವೊಮ್ಮೆ ಮಕ್ಕಳ ಮುಖದಲ್ಲಿ ಸ್ವಲ್ಪ ಸಮಸ್ಯೆ ಅಥವಾ ಕಾರ್ಯದ ಅಲೆಗಳು ಕಾಣಿಸುತ್ತವೆ. ಸ್ವಲ್ಪ ಮುಖವೂ ಬದಲಾಗುತ್ತದೆ. ಒಂದುವೇಳೆ ಯಾರಾದರೂ ಏನಾಯಿತು ಎಂದು ಕೇಳಿದರೆ, ಹೇಳುತ್ತಾರೆ ಕೆಲಸವೇ ಬಹಳಷ್ಟಿದೆಯಲ್ಲವೇ! ವಿಘ್ನ-ವಿನಾಶಕನ ಮುಂದೆ ವಿಘ್ನ ಬರಲಿಲ್ಲವೆಂದರೆ ವಿಘ್ನ-ವಿನಾಶಕನ ಟೈಟಲ್ ಹೇಗೆ ಹಾಡಲಾಗುವುದು? ಸ್ವಲ್ಪ ಮುಖದ ಮೇಲೆ ಸುಸ್ತು ಅಥವಾ ಮೂಡ್ ಬದಲಾಗುವ ಚಿಹ್ನೆ ಬರಬಾರದು. ಏಕೆ? ನಿಮ್ಮ ಜಡ ಚಿತ್ರವನ್ನು ಅರ್ಧಕಲ್ಪ ಪೂಜಿಸಲಾಗುವುದು ಅದರಲ್ಲಿ ಎಂದಾದರೂ ಸ್ವಲ್ಪವೂ ಸುಸ್ತು ಅಥವಾ ಮೂಡ್ ಬದಲಾಗುವ ಚಿಹ್ನೆಯು ಕಾಣಿಸುತ್ತದೆಯೇ? ನಿಮ್ಮ ಜಡ ಚಿತ್ರವೇ ಸದಾ ಮುಗುಳ್ನಗುತ್ತಿದ್ದಾಗ, ಅದು ಯಾರ ಚಿತ್ರವಾಗಿದೆ? ನಿಮ್ಮದೇ ಆಗಿದೆಯಲ್ಲವೇ? ಚೈತನ್ಯ ನೆನಪಾರ್ಥದ(ಸ್ಮೃತಿಚಿಹ್ನೆಯ) ಚಿತ್ರವಾಗಿದೆ. ಅದಕ್ಕಾಗಿ ಸ್ವಲ್ಪವೂ ಸುಸ್ತು ಅಥವಾ ಯಾವುಕ್ಕೆ ಸಿಡುಕುತನ ಎಂದು ಹೇಳುತ್ತೀರೋ ಅದು ಬರಬಾರದು. ಸದಾ ಮುಗುಳ್ನಗುತ್ತಿರುವ ಮುಖ ಬಾಪ್‌ದಾದಾರವರಿಗೆ ಮತ್ತು ಎಲ್ಲರಿಗೂ ಇಷ್ಟವಾಗುತ್ತದೆ. ಒಂದುವೇಳೆ ಯಾರಾದರೂ ಸಿಡುಕಾಗಿದ್ದರೆ ಅವರ ಮುಂದೆ ಹೋಗುತ್ತಾರೆಯೇ? ಯೋಚಿಸುವರು ಈಗಲೇ ಹೇಳುವುದೋ ಅಥವಾ ಬೇಡವೋ. ನಿಮ್ಮ ಜಡ ಚಿತ್ರಗಳ ಹತ್ತಿರ ಭಕ್ತರು ಬಹಳ ಉಲ್ಲಾಸದಿಂದ ಬರುತ್ತಾರೆ ಮತ್ತು ಚೈತನ್ಯದಲ್ಲಿ ಯಾರಾದರೂ ಭಾರಿ(ಹೊರೆ) ಆದರೆ ಚೆನ್ನಾಗನಿಸುವುದೇ? ಈಗ ಬಾಪ್‌ದಾದಾರವರು ಎಲ್ಲಾ ಮಕ್ಕಳ ಮುಖದಲ್ಲಿ ಸದಾ ಫರಿಶ್ತಾ ರೂಪ, ವರದಾನಿ ರೂಪ, ದಾತ ರೂಪ, ದಯಾ ಹೃದಯಿ, ದಣಿವಿಲ್ಲದ, ಸಹಜಯೋಗಿ ಅಥವಾ ಸಹಜ ಪುರುಷಾರ್ಥಿಯ ರೂಪವನ್ನು ನೋಡಲು ಬಯಸುತ್ತಾರೆ. ಈ ರೀತಿ ಹೇಳಬೇಡಿರಿ ವಿಷಯವೇ ಹೀಗಿತ್ತಲ್ಲವೇ, ಎಂತಹದ್ದೇ ವಿಷಯವಿರಲಿ ಆದರೆ ರೂಪವು ಮುಗುಳ್ನಗುತ್ತಿರುವ, ಶೀತಲ, ಗಂಭೀರ ಮತ್ತು ರಮಣೀಕತೆ ಎರಡರ ಬ್ಯಾಲೆನ್ಸ್ ಆಗಿರಲಿ. ಯಾರದರೂ ಇದ್ದಕ್ಕಿದ್ದಂತೆ ಬಂದರು ಮತ್ತು ನೀವು ಸಮಸ್ಯೆಯ ಕಾರಣ ಅಥವಾ ಕಾರ್ಯದ ಕಾರಣ ಸಹಜ ಪುರುಷಾರ್ಥಿಯ ರೂಪದಲ್ಲಿ ಇಲ್ಲವೆಂದರೆ ಅವರು ಏನು ನೋಡುವರು? ನಿಮ್ಮ ಚಿತ್ರವಂತೂ ಅವರೇ ತೆಗೆದುಕೊಂಡು ಹೋಗುವರು. ಯಾವುದೇ ಸಮಯದಲ್ಲಿ, ಯಾರಿಗಾದರೂ ಯಾರದಾದರೂ ಒಂದು ತಿಂಗಳಿನ, ಎರಡು ತಿಂಗಳಿನ, ಇದ್ದಕ್ಕಿದ್ದಂತೆ ನಿಮ್ಮ ಮುಖದ ಚಿತ್ರವನ್ನು ತೆಗೆದರೆ, ಅದು ಮೇಲೆ ತಿಳಿಸಿದ ಚಿತ್ರದ ಹಾಗೆಯೇ ಇರಲಿ. ದಾತಾ ಆಗಿರಿ, ತೆಗೆದುಕೊಳ್ಳುವವರಾಗಬೇಡಿ, ದಾತಾ. ಯಾರಾದರೂ ಏನಾದರೂ ಕೊಡಲಿ, ಒಳ್ಳೆಯದನ್ನೇ ಕೊಡಲಿ ಅಥವಾ ಕೆಟ್ಟದ್ದನ್ನೇ ಕೊಡಲಿ ಆದರೆ ನೀವು ಉನ್ನತೋನ್ನತವಾದ ತಂದೆಯ ಮಕ್ಕಳು ವಿಶಾಲ ಹೃದಯದವರಾಗಿದ್ದೀರಿ ಒಂದುವೇಳೆ ಕೆಟ್ಟದ್ದನ್ನು ಕೊಟ್ಟುಬಿಟ್ಟರೆ, ವಿಶಾಲ ಹೃದಯದಿಂದ ಕೆಟ್ಟದನ್ನು ತಮ್ಮಲ್ಲಿ ಸ್ವೀಕಾರ ಮಾಡದೇ ದಾತಾ ಆಗಿ, ನೀವು ಅವರಿಗೆ ಸಹಯೋಗ ಕೊಡಿ, ಸ್ನೇಹ ಕೊಡಿ, ಶಕ್ತಿಯನ್ನು ಕೊಡಿ. ಯಾವುದಾದರೂಂದು ಗುಣವನ್ನು ತಮ್ಮ ಸ್ಥಿತಿಯಿಂದ ಉಡುಗೊರೆಯಾಗಿ ಕೊಟ್ಟುಬಿಡಿ. ಇಷ್ಟು ವಿಶಾಲ ಹೃದಯವುಳ್ಳ ಉನ್ನತೋನ್ನತವಾದ ತಂದೆಯ ಮಕ್ಕಳು ನೀವು. ದಯೆ ತೋರಿಸಿ. ಹೃದಯದಲ್ಲಿ ಆ ಆತ್ಮನ ಪ್ರತಿ ಇನ್ನೂ ಹೆಚ್ಚು ಸ್ನೇಹವನ್ನು ಪ್ರತ್ಯಕ್ಷ ಮಾಡಿಕೊಳ್ಳಿರಿ. ಆ ಸ್ನೇಹದ ಶಕ್ತಿಯಿಂದ ಅವರು ಸ್ವಯಂ ಪರಿವರ್ತನೆಯಾಗಿ ಬಿಡಲಿ.

ಇಂತಹ ವಿಶಾಲ ಹೃದಯದವರಾಗಿದ್ದೀರಾ ಅಥವಾ ಸಂಕುಚಿತ ಹೃದಯದವರಾ? ಅಳವಡಿಸಿಕೊಳ್ಳುವ ಶಕ್ತಿಯಿದೆಯೇ? ಅಳವಡಿಸಿಕೊಳ್ಳಿರಿ. ಸಾಗರದಲ್ಲಿ ಎಷ್ಟು ಕೆಸರು ಹಾಕುತ್ತಾರೆ, ಹಾಕುವವರಿಗೆ, ಅದು ಕೆಸರಿನ ಬದಲಾಗಿ ಕೆಸರನ್ನೇ ಕೊಡುವುದಿಲ್ಲ. ನೀವಂತು ಜ್ಞಾನ ಸಾಗರ, ಶಕ್ತಿಯ ಸಾಗರನ ಮಕ್ಕಳಾಗಿದ್ದೀರಿ, ಮಾಸ್ಟರ್ ಆಗಿದ್ದೀರಿ.

ಬಾಪ್‌ದಾದಾರವರು ಏನು ನೋಡಲು ಬಯಸುತ್ತಿದ್ದಾರೆಂದು ಕೇಳಿದ್ದೀರಾ? ಅಧಿಕ ಮಕ್ಕಳು ಈ ವರ್ಷದಲ್ಲಿ ಪರಿವರ್ತನೆ ಆಗಬೇಕೆಂಬ ಲಕ್ಷ್ಯವನ್ನು ಇಟ್ಟಿದ್ದಾರೆ. ಮಾಡುವೆವು, ಯೋಚಿಸುವೆವು.. ಇಲ್ಲ, ಮಾಡಲೇ ಬೇಕು. ಮಾಡಲೇಬೇಕೇ ಅಥವಾ ಅಲ್ಲಿ ಹೋಗಿ ಯೋಚಿಸುತ್ತೀರಾ? ಯಾರು ಮಾಡಲೇಬೇಕೆಂದು ತಿಳಿಯುತ್ತೀರೋ ಅವರು ಒಂದು ಕೈಯಿನ ಚಪ್ಪಾಳೆ ತಟ್ಟಿರಿ. (ಎಲ್ಲರು ಕೈ ಅಲುಗಾಡಿಸಿದರು) ಬಹಳ ಒಳ್ಳೆಯದು. ಕೇವಲ ಸ್ಥೂಲ ಕೈಯನ್ನೇ ಎತ್ತ ಬೇಡಿರಿ, ಮನಸ್ಸಿನಿಂದ ದೃಡ ಸಂಕಲ್ಪದ ಕೈಯನ್ನು ಎತ್ತಿರಿ. ಈ ಕೈಯನ್ನು ಎತ್ತುವುದಂತೂ ಸಹಜವಾಗಿದೆಯಲ್ಲವೇ. ಮನಸ್ಸಿನ ದೃಡ ಸಂಕಲ್ಪದ ಕೈ ಸದಾ ಸಫಲತಾ ಸ್ವರೂಪರನ್ನಾಗಿ ಮಾಡುತ್ತದೆ. ಏನು ಯೋಚಿಸುವಿರೋ ಅದು ಆಗಲೇಬೇಕು. ಸಕರಾತ್ಮಕತೆಯನ್ನೇ ಯೋಚಿಸುವಿರಲ್ಲವೇ! ನಕರಾತ್ಮಕತೆಯನ್ನು ಯೋಚಿಸಬಾರದು. ನಕರಾತ್ಮಕತೆಯನ್ನು ಯೋಚಿಸುವ ದಾರಿಯನ್ನು ಸದಾಕಾಲಕ್ಕಾಗಿ ಮುಚ್ಚಿಬಿಡಿ. ಮುಚ್ಚಲು ಬರುತ್ತದೆಯೇ ಅಥವಾ ತೆರೆದು ಬಿಡುತ್ತದೆಯೇ? ಹೇಗೆ ಈಗ ಬಿರುಗಾಳಿ ಬಂತಲ್ಲವೇ, ಬಾಗಿಲುಗಳು ತಾವೇ ತೆರೆದುಬಿಟ್ಟವು, ಹೀಗಾಗುವುದಿಲ್ಲ ತಾನೇ? ನೀವು ಮುಚ್ಚಿ ಬಂದ್ದಿದ್ದೆವು, ಆದರೆ ಬಿರುಗಾಳಿ ತೆರೆದುಬಿಡುತ್ತದೆ ಎಂದು ತಿಳಿದುಕೊಳ್ಳುತ್ತೀರಿ, ಹೀಗೆ ಸಡಿಲವಾಗಿ ಮುಚ್ಚಬೇಡಿರಿ. ಒಳ್ಳೆಯದು.

ಡಬಲ್ ವಿದೇಶಿಯರ ಉತ್ಸವ ಚೆನ್ನಾಗಾಯಿತಲ್ಲವೇ! (10 ವರ್ಷಕ್ಕಿಂತ ಹೆಚ್ಚು ಸಮಯದಿಂದ ಜ್ಞಾನದಲ್ಲಿ ನಡೆಯುವವರ 400 ಸಮೀಪ ಡಬಲ್ ವಿದೇಶಿ ಸಹೋದರ-ಸಹೋದರಿಯರ ಸನ್ಮಾನ ಸಮಾರೋಹ ಆಚರಿಸಲಾಯಿತು) ಇಷ್ಟವಾಯಿತೇ? ಯಾರು ಆಚರಿಸಿದಿರಿ ಮತ್ತು ಇಷ್ಟವಾಯಿತೋ ಅವರು ಕೈ ಎತ್ತಿರಿ. ಪಾಂಡವರು ಇದ್ದಾರೆ. ಇದರ ಮಹತ್ವ ಏನಾಗಿದೆ? ಆಚರಿಸುವುದರ ಮಹತ್ವ ಏನಾಗಿದೆ? ಆಚರಿಸುವುದು ಅರ್ಥಾತ್ ತಯಾರಾಗುವುದು. ಸದಾ ಇಂತಹ ಕಿರೀಟಧಾರಿ, ಸ್ವ ಪುರುಷಾರ್ಥ ಮತ್ತು ಸೇವೆಯ ಜವಾಬ್ದಾರಿ ಏನೆಂದು ಹೇಳುವುದು, ಮೋಜು ಎಂದೇ ಹೇಳುವುದು, ಸೇವೆಯ ಮೋಜನ್ನು ಆಚರಿಸುವ ಕಿರೀಟ ಸದಾ ಇರಲಿ. ಮತ್ತು ಸ್ವರ್ಣಿಮ ಬಣ್ಣದ ದುಪ್ಪಟ್ಟಾ ಎಲ್ಲರೂ ಧರಿಸಿದ್ದೀರಲ್ಲವೇ! ಸ್ವರ್ಣಿಮ ಬಣ್ಣದ ದುಪ್ಪಟ್ಟಾ ಏಕೆ ಧರಿಸಿದ್ದೀರಿ? ಸದಾ ಸ್ವರ್ಣಿಮ (ಗೋಲ್ಡನ್) ಯುಗದ ಸ್ಥಿತಿ, ಸಿಲ್ವರ್ ಅಲ್ಲ, ಗೋಲ್ಡನ್. ಮತ್ತು ಎರಡೆರಡು ಮಾಲೆಯನ್ನು ಧರಿಸುತ್ತಿದ್ದರು. ಯಾವ ಎರಡು ಮಾಲೆಗಳನ್ನು ಧರಿಸುವಿರಿ? ಒಂದು ಸದಾ ತಂದೆಯ ಕೊರಳಿನ ಮಾಲೆ(ಕಂಠಹಾರ). ಸದಾ, ಎಂದೂ ಕೊರಳಿನಿಂದ ತೆಗೆಯಬೇಡಿರಿ, ಕೊರಳಿನಲ್ಲಿಯೇ ಸುತ್ತಿರಲಿ ಮತ್ತು ಇನ್ನೊಂದು ಸದಾ ಸೇವೆಯ ಮೂಲಕ ಬೇರೆಯವರನ್ನೂ ತಂದೆಯ ಕೊರಳಿನ ಮಾಲೆಯನ್ನಾಗಿ ಮಾಡುವುದು. ಇದು ಡಬಲ್ ಮಾಲೆಯಾಗಿದೆ. ಆಚರಿಸುವವರಿಗೂ ಮತ್ತು ನೋಡುವವರಿಗೂ ಚೆನ್ನಾಗಿ ಅನಿಸುತು. ಈ ಉತ್ಸವ ಆಚರಿಸುವುದರ, ಸದಾ ಉತ್ಸವದ ರಹಸ್ಯವನ್ನು ತಿಳಿಸಿರಿ. ಮತ್ತು ಜೊತೆ-ಜೊತೆಯಲ್ಲಿ ಇದನ್ನು ಆಚರಿಸುವುದು ಅರ್ಥಾತ್ ಉತ್ಸಾಹ ಉಲ್ಲಾಸವನ್ನು ಹೆಚ್ಚಿಸುವುದು. ಎಲ್ಲರ ಅನುಭವವನ್ನು ಬಾಪ್‌ದಾದಾರವರು ನೋಡಿದರು. ಒಳ್ಳೆಯ ಅನುಭವಗಳಿದ್ದವು. ಖುಷಿ ಮತ್ತು ನಶೆ ಎಲ್ಲರ ಮುಖದಲ್ಲಿ ಕಾಣಿಸುತ್ತಿತ್ತು. ಇಂತಹ ತಮ್ಮ ಶಕ್ತಿಶಾಲಿ, ಮುಗುಳ್ನಗುತ್ತಿರುವ ರಮಣೀಕ ಮತ್ತು ಗಂಭೀರ ಸ್ವರೂಪ ಸದಾ

ಪ್ರತ್ಯಕ್ಷವಾಗಿಟ್ಟುಕೊಂಡು ನಡೆಯುತ್ತಾ ಇರಿ. ಏಕೆಂದರೆ ಇತ್ತೀಚೆಗಿನ ಸಮಯದ ಪರಿಸ್ಥಿತಿಗಳ ಪ್ರಮಾಣ ಹೆಚ್ಚು ಕೇಳುವಂತಹವರೇ ಇದ್ದಾರೆ. ತಿಳಿದುಕೊಳ್ಳುವಂತಹವರು ಕಡಿಮೆಯಿದ್ದಾರೆ, ನೋಡಿ ಅನುಭವ ಮಾಡುವರು ಹೆಚ್ಚಾಗಿದ್ದಾರೆ. ನಿಮ್ಮ ಮುಖದಲ್ಲಿ ತಂದೆಯ ಪರಿಚಯ, ಕೇಳುವುದರ ಬದಲಾಗಿ ಕಾಣಿಸಲಿ. ಒಳ್ಳೆಯದನ್ನು ಮಾಡಿದಿರಿ. ಬಾಪ್‌ದಾದಾರವರು ನೋಡಿ-ನೋಡಿ ಹರ್ಷಿತರಾಗುತ್ತಿದ್ದಾರೆ. ಈ ವರ್ಷವನ್ನು ಅಥವಾ ಈ ಸೀಜನ್ ಅನ್ನು ವಿಶೇಷ ಉತ್ಸವದ ಸೀಜನ್ ಎಂದು ಆಚರಿಸಿದ್ದಾರೆ. ಪ್ರತಿ ಸಮಯ ಒಂದೇ ತರಹ ಇರುವುದಿಲ್ಲ.

(ಡ್ರಿಲ್) ಎಲ್ಲರಲ್ಲಿ ಆಡಳಿತ ಶಕ್ತಿಯಿದೆಯೇ(ರೂಲಿಂಗ್ ಪವರ್)? ಕರ್ಮೇಂದ್ರಿಯಗಳ ಮೇಲೆ ಯಾವಾಗ ಬೇಕೋ ಆಗ ಆಡಳಿತ ಮಾಡಬಹುದೇ? ಸ್ವ-ರಾಜ್ಯ ಅಧಿಕಾರಿಯಾಗಿದ್ದೀರಲ್ಲವೇ? ಯಾರು ಸ್ವ-ರಾಜ್ಯ ಅಧಿಕಾರಿಯಾಗಿದ್ದಾರೆಯೋ ಅವರೇ ವಿಶ್ವದ ರಾಜ್ಯ ಅಧಿಕಾರಿಗಳಾಗುವರು. ಯಾವಾಗ ಬೇಕೋ ಆಗ ಎಂತಹದೇ ವಾತಾವರಣವಿರಲಿ ಆದರೆ ಮನಸ್ಸು-ಬುದ್ಧಿಗೆ ಆದೇಶ ಕೊಡಿ ‘ನಿಲ್ಲು’, ಎಂದು ಆಗಲೇ ಆಗುವುದೋ ಅಥವಾ ಸಮಯ ಹಿಡಿಸುವುದೋ? ಈ ಅಭ್ಯಾಸ ಪ್ರತಿಯೊಬ್ಬರು ಇಡೀ ದಿನದಲ್ಲಿ ಮಧ್ಯ-ಮಧ್ಯದಲ್ಲಿ ಮಾಡುವುದು ಅವಶ್ಯಕವಾಗಿದೆ. ಮತ್ತು ಯಾವ ಸಮಯದಲ್ಲಿ ಮನಸ್ಸು-ಬುದ್ಧಿ ಬಹಳ ವ್ಯಸ್ಥವಾಗಿರುತ್ತದೆಯೋ, ಇಂತಹ ಸಮಯದಲ್ಲಿಯೂ ಒಂದುವೇಳೆ ಸೆಕೆಂಡಿನಲ್ಲಿ ನಿಲ್ಲಿಸಲಾಗುವುದೇ? ಪ್ರಯತ್ನ ಪಡಿ. ಯೋಚಿಸಿ ನಿಲ್ಲು ಎಂದಿರಿ ಮತ್ತು ನಿಲ್ಲಲು 3 ನಿಮಿಷ, 5 ನಿಮಿಷ ಹಿಡಿಸುತ್ತದೆಯೇ! ಈ ಅಭ್ಯಾಸ ಅಂತಿಮದಲ್ಲಿ ಬಹಳ ಕೆಲಸಕ್ಕೆ ಬರುತ್ತದೆ. ಇದೇ ಆಧಾರದಿಂದ ಪಾಸ್ ವಿತ್ ಆನರ್ (ಗೌರವಾನ್ವಿತ ತೇರ್ಗಡೆ) ಆಗಬಹುದು. ಒಳ್ಳೆಯದು.

**ಸದಾ ಹೃದಯದ ಉತ್ಸಾಹ ಉಲ್ಲಾಸದ ಉತ್ಸವವನ್ನು ಆಚರಿಸುವಂತಹ ಸ್ನೇಹಿ ಆತ್ಮರು, ಸದಾ ವಜ್ರ ಸಮಾನ ಜೀವನ ಅನುಭವ ಮಾಡುವಂತಹ, ಅನುಭವದ ಅಥಾರಿಟಿಯುಳ್ಳ ವಿಶೇಷ ಆತ್ಮರು, ಸದಾ ತಮ್ಮ ಮುಖದಿಂದ ತಂದೆಯ ಪರಿಚಯ ಕೊಡುವಂತಹ ತಂದೆಯನ್ನು ಪ್ರತ್ಯಕ್ಷ ಮಾಡುವಂತಹ ಸೇವಾಧಾರಿ ಆತ್ಮರು, ಸದಾ ಗಂಭೀರ ಮತ್ತು ರಮಣೀಕ ಎರಡನ್ನು ಜೊತೆಯಲ್ಲಿ ಬ್ಯಾಲೆನ್ಸ್ ಇಟ್ಟುಕೊಳ್ಳುವಂತಹ ಎಲ್ಲರ ಆಶೀರ್ವಾದಕ್ಕೆ ಅಧಿಕಾರಿ ಆತ್ಮರು, ಇಂತಹ ನಾಲ್ಕಾರು ಕಡೆಯ ದೇಶ-ವಿದೇಶದ ಮಕ್ಕಳಿಗೆ ಶಿವರಾತ್ರಿಯ ಶುಭಾಷಯಗಳು, ಶುಭಾಷಯಗಳು. ಜೊತೆ-ಜೊತೆಯಲ್ಲಿ ಬಾಪ್‌ದಾದಾರವರ ಹೃದಯರಾಮನ ಹೃದಯದ ಪ್ರೀತಿಯಿಂದ ನೆನಪು, ಪ್ರೀತಿ ಮತ್ತು ನಮಸ್ತೆ.**

ರಿವೈಸ್ ಕೋರ್ಸ್ 31-01-1998.

***ತಂದೆಯೊಂದಿಗೆ, ಸೇವೆಯೊಂದಿಗೆ ಮತ್ತು ಪರಿವಾರದೊಂದಿಗೆ ಪ್ರೀತಿಯನ್ನು ಇಟ್ಟುಕೊಳ್ಳಿರಿ ಆಗ ಪರಿಶ್ರಮದಿಂದ ಮುಕ್ತರಾಗುವಿರಿ.***

ಕೆಲವರು ಸತ್ಯ ಹೃದಯದಿಂದ ನಿಸ್ವಾರ್ಥ ಸೇವೆಯಲ್ಲಿ ಮುಂದುವರೆಯುತ್ತಾ ಹೋಗುತ್ತಾರೆ. ಅವರ ಖಾತೆಯಲ್ಲಿ ಪುಣ್ಯದ ಖಾತೆ ಹೆಚ್ಚು ಜಮಾ ಆಗುತ್ತಾ ಹೋಗುವುದನ್ನು ಬಾಪ್‌ದಾದಾ ರವರು ನೋಡುತ್ತಾರೆ.

1.ಕೆಲವು ಮಕ್ಕಳಿಗೆ ತಮ್ಮ ಪುರುಷಾರ್ಥದ ಪ್ರಾರಬ್ಧದ ಖಾತೆ.

2.ಅವರು ಸಂತುಷ್ಟರಾಗಿ ಇತರರನ್ನು ಸಂತುಷ್ಟರನ್ನಾಗಿ ಮಾಡುವುದರಿಂದ ಆಶೀರ್ವಾದದ ಖಾತೆ ಮತ್ತು 3.ಯಥಾರ್ಥ ಯೋಗಯುಕ್ತ ಯುಕ್ತಿ ಯುಕ್ತ ಸೇವೆಯ ರಿಟರ್ನ್ ನಲ್ಲಿ ಪುಣ್ಯದ ಖಾತೆ ಜಮಾ ಆಗುವುದು. ಪ್ರತಿಯೊಬ್ಬರ ಈ ಮೂರು ಖಾತೆಗಳನ್ನು ಬಾಪ್‌ದಾದಾರವರು ನೋಡುತ್ತಿದ್ದಾರೆ. ಅವರು ಸದಾ ತಮ್ಮನ್ನು ಮತ್ತು ಇತರರನ್ನು ಸಹಜ ಪುರುಷಾರ್ಥಿಯನ್ನಾಗಿ ಅನುಭವ ಮಾಡಿಕೊಳ್ಳುತ್ತಾರೆ ಪರಿಶ್ರಮ ಪಡಬೇಕಾಗಿಲ್ಲ. ತಂದೆಯೊಂದಿಗೆ, ಸೇವೆಯೊಂದಿಗೆ ಮತ್ತು ಸರ್ವ ಪರಿವಾರದೊಂದಿಗೆ ಪ್ರೀತಿ ಇದ್ದರೆ ಈ ಮೂರು ಪ್ರಕಾರದ ಪ್ರೀತಿ ಪರಿಶ್ರಮದಿಂದ ಮುಕ್ತರನ್ನಾಗಿ ಮಾಡಿಬಿಡುತ್ತದೆ.

ಎಂದು ತಿಳಿಸುತ್ತಾ ಶಿವ ಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಸುಖ ಸ್ವರೂಪ, ಶಿವಪರಮಾತ್ಮ ನನ್ನ ತಂದೆ.

1. ನಾನು ತಂದೆಯ ದಿವ್ಯಜನ್ಮವನ್ನು ಆಚರಿಸುವುದರೊಂದಿಗೆ ಸ್ವಯಂ ಅನ್ನು ತಂದೆಯ ಸಮಾನವಾಗಿ ತಯಾರು ಮಾಡಿಕೊಳ್ಳುತ್ತಿದ್ದೇನೆ.

2. ನಾನೇ ತಂದೆಯ ಸಮಾನವಾಗಿ ಆಗಿದ್ದೆನು, ನಾನೇ ಆಗುತ್ತೇನೆ ಮತ್ತು ಪ್ರತಿಕಲ್ಪವೂ ತಯಾರಾಗುತ್ತೇನೆ ಎಂಬ ನಿಶ್ಚಯದಿಂದ ಇದ್ದೇನೆ.

3. ನಾನು ಸತ್ಯವಾದ ಹೃದಯದಿಂದ ನಿಸ್ವಾರ್ಥವಾಗಿ ಸೇವೆಯನ್ನು ಮಾಡುತ್ತಾ ಪುಣ್ಯದ ಖಾತೆಯನ್ನು ಹೆಚ್ಚು ಜಮಾ ಮಾಡಿಕೊಳ್ಳುವ ಸತ್ಯವಾದ ಸೇವಾದಾರಿ.

4. ನಾನು ಪುರುಷಾರ್ಥದಿಂದ ಪ್ರಾಲಬ್ಧದ ಖಾತೆಯನ್ನು, ಸಂತುಷ್ಟವಾಗಿರುತ್ತಾ ಇದರನ್ನು ಸಂತುಷ್ಟ ಮಾಡುತ್ತಾ ಆಶೀರ್ವಾದದ ಖಾತೆಯನ್ನು, ಯಥಾರ್ಥ ಯೋಗಯುಕ್ತ ಯುಕ್ತಿಯುಕ್ತ ಸೇವೆಯ ಫಲವಾಗಿ ಪುಣ್ಯದ ಖಾತೆಯನ್ನು ಜಮಾ ಮಾಡಿಕೊಂಡು ಶ್ರಮದಿಂದ ಮುಕ್ತನಾಗಿದ್ದೇನೆ.

5. ನಾನು ಸ್ವಯಂ ಅನ್ನು ಸಹಜ ಪುರುಷಾರ್ಥಿಯನ್ನಾಗಿ ಅನುಭವ ಮಾಡಿ, ಇತರರಿಗೆ ಸ್ವತಹವಾಗಿ ಸಹಜ ಪುರುಷಾರ್ಥಿಯಾಗುವ ಪ್ರೇರಣೆಯನ್ನು ಕೊಟ್ಟಿದ್ದೇನೆ.

6. ನಾನು ಎಷ್ಟು ದೊಡ್ಡ ಕಾರ್ಯವನ್ನಾದರೂ, ಎಷ್ಟು ದೊಡ್ಡ ಸಮಸ್ಯೆಯನ್ನಾದರೂ, ಆ ಕಾರ್ಯವನ್ನು, ಸಮಸ್ಯೆಯನ್ನು, ಬೆಣ್ಣೆಯಲ್ಲಿನ ಕೂದಲು ತೆಗೆದಷ್ಟು ಸಹಜವಾಗಿ ದಾಟುವ ಸಹಜಪುರುಷಾರ್ಥಿ, ವಿಘ್ನ ವಿನಾಶಕನು,

7. ನಾನು ನನ್ನ ಮುಖದಿಂದ ಸದಾ ಫರಿಶ್ತಾ ರೂಪ, ವರದಾನಿ ರೂಪ, ದಾತ ರೂಪ, ದಯಾಹೃದಯಿ, ದಣಿವಿಲ್ಲದ, ಸಹಜ ಯೋಗಿ ಅಥವಾ ಸಹಜ ಪುರುಷಾರ್ಥಿಯ ರೂಪದಿಂದ ಇರುವ ದೇವತಾ ಸ್ವರೂಪ.

8. ನನಗೆ ಯಾರಾದರೂ ಕೆಟ್ಟದ್ದನ್ನು ಕೊಟ್ಟರೂ, ನಾನು ವಿಶಾಲ ಹೃದಯದಿಂದ ಕೆಟ್ಟದ್ದನ್ನು ಸ್ವಯಂ ಸ್ವೀಕರಿಸದೇ, ಅಳವಡಿಸಿಕೊಂಡು, ದಾತನಾಗಿ, ಸಹಯೋಗವನ್ನು, ಸ್ನೇಹವನ್ನು, ಶಕ್ತಿಯನ್ನು ಕೊಟ್ಟು ಪರಿವರ್ತನೆ ಮಾಡುವ ದಯಾ ಹೃದಯ ಸ್ವರೂಪ, ಮಾಸ್ಟರ್ ಜ್ಞಾನಸಾಗರನು, ಮಾಸ್ಟರ್ ಶಕ್ತಿ ಸಾಗರನು.

9. ನಾನು ಶೀತಲತೆ, ಗಂಭೀರತೆ ಮತ್ತು ರಮಣೀಯತೆ ಎರಡರ ಸಮಾನತೆಯನ್ನು ಇಟ್ಟುಕೊಂಡಿದ್ದೇನೆ.

10. ನಾನು ಪರಿವರ್ತನೆ ಆಗಲೇಬೇಕು ಎಂಬ ದೃಢಸಂಕಲ್ಪವನ್ನು ಮನಸ್ಸಿನಿಂದ ಮಾಡಿರುವ ಸಫಲತಾ ಸ್ವರೂಪ.

11. ನಾನು ಸ್ವಾರಾಜ್ಯಾಧಿಕಾರಿಯಿಂದ ವಿಶ್ವರಾಜ್ಯಾಧಿಕಾರಿ ಆಗುತ್ತೇನೆ.

12. ನನ್ನ ಮನಸ್ಸು, ಬುದ್ಧಿ ಬ್ಯುಜಿಯಾಗಿರುವ ಸಮಯದಲ್ಲಿಯೂ ನನ್ನ ಮನಸ್ಸು, ಬುದ್ಧಿಗೆ ಸ್ಟಾಪ್ ಎಂದು ಆರ್ಡರ್ ಕೊಟ್ಟಾಕ್ಷಣ ಸ್ಟಾಪ್ ಆಗುವ ಅಭ್ಯಾಸದಿಂದ ಆಸ್ ವಿತ್ ಆನರ್ ಆಗಿದ್ದೇನೆ.